

# ಚಳಿಯಲಿ; ಬೆಚ್ಚನೆಯ ಉಡುಪಿನ ಜೊತೆಯಲಿ...

ಚಳಿಗಾಲ ಬಂತೆಂದರೆ ಉಣ್ಣೆಯ, ದಪ್ಪ ಹತ್ತಿ ಬಟ್ಟೆಯ ಕಾರುಬಾರು ವಾರ್ಡ್‌ರೋಬ್‌ನಲ್ಲಿ. ಆಗಿನ ಸ್ವೆಟರ್‌ಗಳೇ ಫ್ಯಾಷನ್‌ನ ಸಖ್ಯ ಬೆಳೆಸಿ ಈಗ ವೈವಿಧ್ಯದ ರೂಪು ತಳೆದಿವೆ. ಚಳಿಗಾಲಕ್ಕೆಂದೇ ತಯಾರಾಗುವ ಸ್ವೆಟ್ ಡ್ರೆಸ್‌ಗಳು ಯುವ ಮನವನ್ನು ಆಕರ್ಷಿಸುತ್ತಿವೆ.

■ ಸುಮಾ ಬಿ.

ಆದಿನದ ಮುಂಜಾವು ಹಿಂದಿನ ದಿನದಂತಿರಲಿಲ್ಲ. ತರಣಿಯ ಕಿರಣಗಳು ಭುವಿಗೆ ಮುತ್ತಿಕ್ಕುವ ಮುನ್ನವೇ ವಾಯುವಿಹಾರದ ಅರ್ಧ ಭಾಗ ಮುಗಿಸುತ್ತಿದ್ದ ದೇಹವೇಕೋ ಬೆಚ್ಚಗೆ ಹೊದ್ದು ಮಲಗೆನ್ನುತ್ತಿತ್ತು. ಆಗಲೇ ಅರಿವಿಗೆ ಬಂದದ್ದು ಚುಮುಚುಮು ಚಳಿ ಕಿಲಕಿಲ ನಗುತ್ತ ಮೈ ಆವರಿಸಿದೆ ಎಂದು. ಅಷ್ಟುದಿನ ಯಾವ ಬಿಗುಮಾನವೂ ಇಲ್ಲದೆ ಏಳುತ್ತಿದ್ದ ದೇಹಕ್ಕೂ ಚಳಿಯ ಸ್ಪರ್ಶ ಹಿತವೆನ್ನಿಸಿ ಬೆಡ್‌ಶೀಟ್ ಅನ್ನು ಇನ್ನಷ್ಟು ಬಿಗಿದಪ್ಪಿತು. ಬೆಳಗಿನ ನಡಿಗೆ ಆಗದಿದ್ದರೆ ಮನಸಿಗೆ ಸಮಾಧಾನವುಂಟೇ...? ಚಾದರ ಸರಿಸಿ ಹೊರಗೆ ಅಡಿ ಇಡುತ್ತಿದ್ದಂತೆ ಕೈಗಳು ತಡಕಾಡಿದ್ದು ವಾರ್ಡ್‌ರೋಬ್‌ನ ಮೂಲೆ ಸೇರಿದ್ದ ಸ್ವೆಟರ್, ಮಫ್ಲರ್, ಸಾಕ್ಸ್‌ಗಳನ್ನ...

ಮಾಗಿ ಚಳಿ ಮೈಗಾವರಿಸಿ ನಡುಕ ಹುಟ್ಟಿಸಿದರೂ 'ಮೇಲ್ಹೊದಿಕೆ'ಯು ಬೆಚ್ಚನೆಯ ಭಾವ ಸ್ಫುರಿಸುತ್ತದೆ. ಮುಂಜಾವಿನ ಚಳಿಗೆ ಸ್ವೆಟರ್, ಮಫ್ಲರ್ ಎಂಬೋ ಮೇಲ್ಹೊದಿಕೆಗಳು ಜೊತೆಯಾಗುತ್ತವೆ. ಆದರೆ, ದಿನವಿಡೀ ಕಾಡುವ ಚಳಿಗೆ ಟ್ರೆಂಡಿ ಮೇಲ್ಹೊದಿಕೆಗಳು ಬೇಕಲ್ಲವೇ? ಆಗೆಲ್ಲ ಎಷ್ಟೇ ಚಳಿ ಇದ್ದರೂ ಸ್ವೆಟರ್ ಒಂದೇ ದೇಹವನ್ನು ಬೆಚ್ಚಗಿಡುವ ಸರ್ವತಂತ್ರ ಸಾಧನವಾಗಿತ್ತು. ಆದರೀಗ ಫ್ಯಾಷನ್‌ನ ಓಘದಲ್ಲಿ ವೈವಿಧ್ಯದ ಉಡುಗೆಗಳೇ ಬೆಚ್ಚನೆಯ ಅನುಭೂತಿ ನೀಡುತ್ತವೆ. ಚಳಿಗಾಲದೊಂದಿಗೆ ಫ್ಯಾಷನ್ ಕೂಡ ತಳಕು ಹಾಕಿಕೊಂಡಿದೆ. ಕಾಲಕ್ಕೆ ತಕ್ಕಂತೆ ವಾರ್ಡ್‌ರೋಬ್‌ನ ಫ್ಯಾಷನ್ ಮಗ್ಗಲು ಹೊರಳಿಸುತ್ತದೆ. ಚಳಿಗಾಲ ಬಂತೆಂದರೆ ಉಣ್ಣೆಯ, ದಪ್ಪ ಹತ್ತಿ ಬಟ್ಟೆಯ ಕಾರುಬಾರು ವಾರ್ಡ್‌ರೋಬ್‌ನಲ್ಲಿ. ಆಗಿನ ಸ್ವೆಟರ್‌ಗಳೇ ಫ್ಯಾಷನ್‌ನ ಸಖ್ಯ ಬೆಳೆಸಿ ಈಗ ವೈವಿಧ್ಯದ ರೂಪು ತಳೆದಿವೆ. ಚಳಿಗಾಲಕ್ಕೆಂದೇ ತಯಾರಾಗುವ ಬೆಚ್ಚನೆಯ ಡ್ರೆಸ್‌ಗಳು ಯುವ ಮನವನ್ನು ಆಕರ್ಷಿಸುತ್ತಿವೆ.

ಶುದ್ಧ ಹತ್ತಿ, ರೇಷ್ಮೆ, ಉಣ್ಣೆ ಹಾಗೂ ಲೆನಿನ್ ಬಟ್ಟೆಗಳನ್ನು ಚಳಿಗಾಲಕ್ಕೆ ಆಯ್ಕೆ ಮಾಡಿಕೊಳ್ಳುವುದು ಸಹಜ. ಈ ಬಟ್ಟೆಗಳಲ್ಲೇ ಈಗ ಹೊಸತನ ಹುಡುಕುವ ಕಾಲವಿದು. ಪುಲ್ ಓವರ್, ಪಫರ್ ಕೋಟ್, ಶ್ಯಾಕೆಟ್ಸ್, ಉಣ್ಣೆ ಕೋಟ್, ಸ್ವೆಟ್ ಟಾಪ್ ಹೀಗೆ... ಫ್ಯಾಷನ್‌ಪ್ರಿಯರಿಗೆ ಆಯ್ಕೆಗಳು ಹಲವು. ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಂಡು ದಿನಕ್ಕೊಂದು ಉಡುಪು ತೊಟ್ಟು ಬೀಗಬಹುದು.

## ದೇಹಕ್ಕೊಪ್ಪುವ ಶ್ಯಾಕೆಟ್

ಜಾಕೆಟ್ ಮತ್ತು ಶರ್ಟ್‌ನ ಸಂಯೋಜಿತ ರೂಪವೇ ಶ್ಯಾಕೆಟ್. ಶರ್ಟ್ ಹಾಗೂ ಜಾಕೆಟ್ ಎರಡನ್ನೂ ಒಟ್ಟಿಗೆ



